**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 34/2025** ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 7

| | |
|---|---|
| ಸಾಕ್ಷಿದಾರರ ಹೆಸರು | ಅನ್ಸಾರ್ ಅಹಮದ್ |
| ತಂದೆಯ ಹೆಸರು | ಅಬ್ದುಲ್ ಅಜೀಜ್ |
| ವಯಸ್ಸು | 42 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಚಿಟ್ಪಾಡಿ, ಉಡುಪಿ |

ದಿನಾಂಕಃ 20-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ-8 ಗೊತ್ತು. ಈದಿನ ವಿಸಿ ಮೂಲಕ ಹಾಜರುಪಡಿಸಿರುವ ವ್ಯಕ್ತಿಯನ್ನು ಗುರುತಿಸಿದ್ದೇನೆ. ಆತನನ್ನು ತಾರೀಕು 24-03-2025 ರಂದು ಉಡುಪಿಯ ನಗರ ಠಾಣೆಯಲ್ಲಿ ನೋಡಿದ್ದೆ. ಆದಿನ ನನ್ನನ್ನು ಮತ್ತು ಚಾಸಾ-8 ಇವರನ್ನು ಪೊಲೀಸರು ಠಾಣೆಗೆ ಕರೆಯಿಸಿಕೊಂಡು, ಈಗ ತೋರಿಸಿದ ವ್ಯಕ್ತಿಯ ದಸ್ತಗಿರಿ ಮಾಡಬೇಕಾಗಿರುವುದಾಗಿ ಹೇಳಿದ್ದರು. ಅದಕ್ಕಾಗಿ ಮಧ್ಯಾಹ್ನ 12.30 ರಿಂದ 1.00 ಗಂಟೆಯ ಸಮಯದಲ್ಲಿ ಪಂಚನಾಮೆ ಬರೆದಿದ್ದರು. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-2** ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿ ನಿಶಾನೆ ಪಿ-2(ಎ) ಎಂದು ಗುರುತಿಸಿದ್ದೇನೆ. ಆದಿನ ಪೊಲೀಸರು ಆರೋಪಿಯನ್ನು ಕೃಷ್ಣ ಮಠದ ಬಳಿ ಇನ್ನೊಬ್ಬ ವ್ಯಕ್ತಿಗೆ ಚಾಕುವಿನಿಂದ ಹಲ್ಲೆ ಮಾಡುತ್ತಿದ್ದ ಎಂಬ ಕಾರಣಕ್ಕಾಗಿ ದಸ್ತಗಿರಿ ಮಾಡಿದ್ದರು ಎಂದು ತಿಳಿದಿತ್ತು.

2) ಆದಿನ ದಸ್ತಗಿರಿ ಮಾಡಿದ್ದ ವ್ಯಕ್ತಿ ನಮ್ಮನ್ನು ಮತ್ತು ಪೊಲೀಸರನ್ನು ಹಲ್ಲೆ ಮಾಡಿದ್ದ ಜಾಗೆಯನ್ನು ತೋರಿಸುವುದಾಗಿ ಹೇಳಿ ಕರೆದುಕೊಂಡು ಹೋಗಿದ್ದ. ಆರೋಪಿ ಆದಿನ ನಮ್ಮನ್ನು ವಿದ್ಯೋದಯ ಶಾಲೆಯಿಂದ ಕೃಷ್ಣ ಮಠಕ್ಕೆ ಬರುವ ರಸ್ತೆಯ

ಬಲಭಾಗದ ಖಾಲಿ ಜಾಗೆಗೆ ಕರೆದುಕೊಂಡು ಹೋಗಿದ್ದ. ಅಲ್ಲಿ ಚಾಕುವಿನಿಂದ ಹಲ್ಲೆ ಮಾಡಿದ್ದ ಜಾಗೆಯನ್ನು ತೋರಿಸಿದ್ದ. ಅದಕ್ಕಾಗಿ 3.30 ರಿಂದ 4.20 ರ ಸಮಯದಲ್ಲಿ ಪಂಚನಾಮೆಯೊಂದನ್ನು ಮಾಡಿದ್ದರು. ಅದಕ್ಕೆ ನಾನು ಸಹ ಸಹಿ ಮಾಡಿದ್ದೆ. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-3** ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿ **ನಿಶಾನೆ ಪಿ-3(ಎ)** ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಪೋಟೋವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-4** ಎಂದು ಗುರುತಿಸಿದ್ದೇನೆ.

3) ಅಲ್ಲಿಂದ ಠಾಣೆಗೆ ಬಂದಿದ್ದೆವು. ಅಲ್ಲಿ ಅದೇ ದಿನ ಸಂಜೆಯ 5.30 ರಿಂದ 6.00 ಗಂಟೆಯ ಸಮಯದಲ್ಲಿ ಆರೋಪಿ ಹಾಜರುಪಡಿಸಿದ ಬಟ್ಟೆ ಮತ್ತು ಚಾಕುವನ್ನು ಜಪ್ತು ಮಾಡಿದ್ದರು. ಆಗ ನಾನು ಮತ್ತು ಚಾಸಾ-8 ಇದ್ದೆವು. ಅದಕ್ಕಾಗಿ ಪೊಲೀಸರು ಅವುಗಳನ್ನು ಜಪ್ತು ಮಾಡಿಕೊಂಡು ಅಲ್ಲಿಯೇ ಪಂಚನಾಮೆಯನ್ನು ಬರೆದಿದ್ದರು. ಆಗ ಬರೆದಿದ್ದ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-5** ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿ **ನಿಶಾನೆ ಪಿ-5(ಎ)** ಎಂದು ಗುರುತಿಸಿದ್ದೇನೆ.

4) ಆದಿನ ಜಪ್ತು ಮಾಡಿದ ಚೂರಿಯನ್ನು ಮತ್ತು ಬಟ್ಟೆಯನ್ನು ಸಹ ಗುರುತಿಸಬಲ್ಲೆ. ಈಗ ಎಪ್ ಎಸ್ ಎಲ್ ಸೀಲು ಇರುವ ಕ್ರಮ ಸಂಖ್ಯೆ-1 ರ ಪ್ಯಾಕ್ ನ್ನು ತೆರೆದು, ಅದರಲ್ಲಿಯ ಚಾಕುವನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಎಂಒ-1 ಎಂದು ಗುರುತಿಸಿದೆ. ಕ್ರಮ ಸಂಖ್ಯೆ-2 ರ ಎಫ್ ಎಸ್ ಎಲ್ ಸೀಲು ಇರುವ ಪ್ಯಾಕ್ ನ್ನು ತೆರೆದು, ಅದರಲ್ಲಿಯ ಪ್ಯಾಂಟ್ ನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಎಂಒ-2 ಎಂದು, ಕ್ರಮ ಸಂಖ್ಯೆ-3 ರ ಎಫ್ ಎಸ್ ಎಲ್ ಸೀಲು ಇರುವ ಪ್ಯಾಕ್ ನ್ನು ತೆರೆದು, ಅದರಲ್ಲಿಯ ಟೀ ಶರ್ಟ್ ನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಎಂಒ-3 ಎಂದು ಗುರುತಿಸಿದೆ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅವಕಾಶ ಕೋರಿದ್ದು, ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ಆದಿನ ಸಂಜೆ ಠಾಣೆಯಲ್ಲಿ ಎಂಒ-1ರ ಚಾಕುವನ್ನು ಅರೋಪಿಯ ವಶದಿಂದ ವಶಪಡಿಸಿಕೊಂಡಿದ್ದರು ಎಂದರೆ ನಿಜ. ಎಂಒ-2 ಮತ್ತು 3ರ ಬಟ್ಟೆಗಳನ್ನು ಪೊಲೀಸ್ ಸಿಬ್ಬಂದಿ ತಂದು ಹಾಜರುಪಡಿಸಿದ್ದರು ಎಂದರೆ ನಿಜ. ಆ ಬಟ್ಟೆಗಳು ಗಾಯಾಳುವಿಗೆ ಸೇರಿತ್ತು ಎಂದರೆ ನಿಜ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

1) ನಾನು ಕಾರುಗಳ ಬಾಡಿಗೆ ಚಾಲಕನಾಗಿ ಮತ್ತು ಖಾಸಗಿ ವ್ಯವಹಾರ ಮಾಡಿಕೊಂಡಿದ್ದೇನೆ. ನಗರ ಠಾಣೆಯಿಂದ ನನ್ನ ಮನೆ ಸುಮಾರು 2 ರಿಂದ 3 ಕಿ.ಮೀಗಳ ಅಂತರ. ನಾನು ಹಲವಾರು ಕೇಸುಗಳಲ್ಲಿ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ, ಅವು ಸುಮಾರು 5-6 ಕೇಸುಗಳು ಇರಬಹುದು. ಪೊಲೀಸರು ಕರೆದಾಗ ನಾನು ಹೋಗಿ, ದಾಖಲೆಗಳಿಗೆ ಸಹಿ ಮಾಡುತ್ತೇನೆ ಎಂದರೆ, ನಾನು ಕೆಲಸ ಇದ್ದಾಗ ಸಹ ಠಾಣೆಗೆ ಹೋಗಿರುತ್ತೇನೆ, ಆಗ ಪೊಲೀಸರು ನನ್ನನ್ನು ಕೇಳಿದ್ದರು. ಆದಿನ ನಾನು ಠಾಣೆಯ ಹತ್ತಿರವೇ ಹೋಗಿದ್ದೆ. ಚಾಸಾ-8 ಪರಿಚಯದವರು ಮತ್ತು ನನ್ನ ಗೆಳೆಯ. ಆತ ನಂತರ ಬಂದಿದ್ದ.

2) ಆದಿನ ನಾನು ಆರೋಪಿಯನ್ನು ಠಾಣೆಯಲ್ಲಿ ನೋಡಿದಾಗ ಆತ ಯಾವ ಬಣ್ಣದ ಬಟ್ಟೆ ತೊಟ್ಟಿದ್ದನು ಎಂದು ಈಗ ನೆನಪಿಲ್ಲ. ಆದಿನ ಆರೋಪಿ ಠಾಣೆಗೆ ಆತನೇ ಬಂದಿದ್ದನೇ, ಅಥವಾ ಬೇರೆಯವರಾಗಲೀ, ಪೊಲೀಸರಾಗಲೀ ಆತನನ್ನು ಕರೆತಂದಿದ್ದರೇ ಎಂದು ಈಗ ನೆನಪಿಲ್ಲ. ಆದಿನ ನಾನು ಆರೋಪಿಯೊಂದಿಗೆ ಮಾತನಾಡಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಯಾರಿಗೆ ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಚಾಕುವಿನಿಂದ ಹಲ್ಲೆ ಮಾಡಿದ್ದನು ಎಂಬುದನ್ನು ಒಪ್ಪಿ ಕೊಂಡಿದ್ದನ್ನು ಎಂದು ನಿಪಿ-2ರಲ್ಲಿ ಹೇಳಿಲ್ಲ ಎಂದರೆ ಗೊತ್ತಿಲ್ಲ. ಆರೋಪಿ ನಿಪಿ-2ರಲ್ಲಿ ಹೇಳಿದಂತಹ ವಿಷಯವನ್ನು ಹೇಳಿಲ್ಲ ಮತ್ತು ತಿಳಿದುಕೊಂಡಿಲ್ಲ

ಎಂದರೆ ಗೊತ್ತಿಲ್ಲ. ನಿಪಿ-2 ರ ಅಡಿಯಲ್ಲಿ ಆರೋಪಿಯ ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ.

3) ನಾನು ನಿಪಿ-3 ರ ಜಾಗೆಗೆ ಪೊಲೀಸರ ಜೀಪ್ ನಲ್ಲಿ ಹೋಗಿದ್ದೆವು. ಆದಿನ ಜೀಪಿನ ಮುಂಭಾಗದಲ್ಲಿ ಎಸ್.ಐ ಮತ್ತು ಅದರ ಹಿಂದಿನ ಸಾಲಿನಲ್ಲಿ ಲೇಡಿ ಪೊಲೀಸ್, ಆರೋಪಿ ಮತ್ತು ಸಿಬ್ಬಂದಿಗಳು ಇದ್ದರು. ನಾನು ಮತ್ತು ಇತರರು ಹಿಂದೆ ಇದ್ದೆವು. ಠಾಣೆಯಿಂದ ನಿಪಿ-3 ರ ಜಾಗೆಗೆ ಹೋಗುವ ಸಮಯ ನಾನಾಗಲೀ, ಪೊಲೀಸರಾಗಲೀ ಆತನೊಂದಿಗೆ ಮಾತನಾಡಿಲ್ಲ. ಆರೋಪಿಯು ಸುಮ್ಮನೇ ಇದ್ದ ಎಂದರೆ, ಆತ ಹೋಗುವ ಮಾರ್ಗ ತೋರಿಸಿದ್ದ. ಆದಿನ ನಾವು ಮಿತ್ರ ಆಸ್ಪತ್ರೆಯ ಮಾರ್ಗವಾಗಿ ಆ ಜಾಗೆಗೆ ಹೋಗಿದ್ದೆವು. ಆದಿನ ನಾವು ಹೋಗಿದ್ದ ಜಾಗೆಯ ಬಳಿಯಲ್ಲಿ ವೆಲ್ಡಿಂಗ್ ಕೆಲಸ ಆಗುತ್ತಿತ್ತು. ಅಲ್ಲಿ ಕಬ್ಬಿಣದ ಸಾಮಾಗ್ರಿಗಳು ಇದ್ದವು. ಆದಿನ ಪೊಲೀಸರು ಒಂದು ಜಾಗೆಯಲ್ಲಿ ಮಾತ್ರ ಪರಿಶೀಲನೆ ಮಾಡಿದ್ದರು. ನಾವು ನೋಡಿದ ಜಾಗೆ ವಾಸ್ತವಕ್ಕೆ ಯೋಗ್ಯವಾದ ಜಾಗೆ ಆಗಿತ್ತು. ಆದಿನ ನೋಡಿದ ಮರ ಯಾವುದು ಎಂದು ಈಗ ನೆನಪಿಲ್ಲ. ಆರೋಪಿ ನಮ್ಮನ್ನು ಮತ್ತು ಪೊಲೀಸರನ್ನು ನಿಪಿ-3 ಮತ್ತು 4 ರ ಜಾಗೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ನಿಪಿ-3 ರ ದಾಖಲೆಯನ್ನು ಬರೆದಿಲ್ಲ ಎಂದರೆ ಸರಿಯಲ್ಲ.

4) ನಿಶಾನೆ ಪಿ-4 ರ ಪೋಟೋವನ್ನು ಮೊಬೈಲ್ ನಲ್ಲಿ ತೆಗೆದಿದ್ದರು, ಅದು ಯಾರ ಮೊಬೈಲ್ ಎಂದು ಈಗ ನೆನಪಿಲ್ಲ. ನಿಪಿ-4 ರ ಪೋಟೋವನ್ನು ಈ ವಿಚಾರಣೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಎಂಒ-1 ರ ಚಾಕುವನ್ನು ಆದಿನ ಆರೋಪಿಯೇ ತೆಗೆದು ಕೊಟ್ಟಿದ್ದ. ಅದು ಆತನ ಬಳಿಯಲ್ಲಿ ಇತ್ತು. ಆರೋಪಿ ಎಂಒ-1 ರ ಚಾಕುವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಎಂಒ-2 ಮತ್ತು 3 ರ ಬಟ್ಟೆಗಳನ್ನು ಪೊಲೀಸ್ ಸಿಬ್ಬಂದಿ ಹಾಜರುಪಡಿಸಿದ್ದರು, ಅವುಗಳು ಗಾಯಾಳುಗಳ ಬಟ್ಟೆಗಳು ಎಂದು ಹೇಳಿದ್ದರು. ಎಂಒ-2 ಮತ್ತು 3 ರ ಬಟ್ಟೆಗಳು ಗಾಯಾಳುವಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಎಂಒ-1 ರಿಂದ 3 ರ ಮುದ್ದೆಮಾಲುಗಳನ್ನು ಈ ವಿಚಾರಣೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ನಿಪಿ-5 ರ ಮಹಜರನ್ನು ಆದಿನ ನನ್ನ ಸಮಕ್ಷಮ ಬರೆದಿಲ್ಲ ಎಂದರೆ ಸರಿಯಲ್ಲ.

5) ನಾನು ಉಡುಪಿ ನಗರ ಠಾಣೆಯ ಪೊಲೀಸರ ಖಾಯಂ ಸಾಕ್ಷಿದಾರ ಎಂದರೆ ಸರಿಯಲ್ಲ. ಪೊಲೀಸರ ಸಹಾಯಕ್ಕೆ ಸಾಕ್ಷಿ ನುಡಿಯಲು ನಾನು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.